# ಅಂಗೈಯಲ್ಲಿ ಅರಮನೆ

## ಮಿಸ್ಟರ್-ಸಿಸ್ಟರ್

ಕೈಫ್ ನಮ್ಮ ಕಾಲೇಜಿನಲ್ಲಿ ಪಿಯುಸಿ ಓದುತ್ತಿರುವ ಹುಡುಗ. ಒಮ್ಮೊಮ್ಮೆ ಅವನಾಡುವ ಮಾತುಗಳು ಇಡೀ ತರಗತಿಯನ್ನು ನಗೆಗಡಲಲ್ಲಿ ಮುಳುಗಿಸುತ್ತವೆ. ಒಮ್ಮೆ ನಾನು ತರಗತಿಯಲ್ಲಿ ಮಿಸ್ಟರ್ ಮತ್ತು ಮಿಸ್ಟ್ರೇಸ್ ಪದಗಳ ಬಳಕೆಯ ಬಗ್ಗೆ ವಿವರಿಸುತ್ತಿದ್ದೆ. 'ಗಂಡು ಮಕ್ಕಳನ್ನು ಕರೆಯುವಾಗ 'ಮಿಸ್ಟರ್' ಎಂದು ಸಂಬೋಧಿಸಬೇಕು. ಹಾಗಾದರೆ ಹೆಣ್ಣು ಮಕ್ಕಳನ್ನು ಏನೆಂದು ಸಂಬೋಧನೆ ಮಾಡಬೇಕು?' ಎಂದು ಕೇಳಿದೆ. ಕೈಫ್ ಕೈ ಎತ್ತಿದ. 'ಹೇಳಪ್ಪ' ಎಂದೆ. 'ಗಂಡು ಮಕ್ಕಳು ಮಿಸ್ಟರ್ ಆದರೆ ಹೆಣ್ಣುಮಕ್ಕಳು ಸಿಸ್ಟರ್' ಎಂದಾಗ ಇಡೀ ತರಗತಿಯಲ್ಲಿ ನಗು ಅಲೆಅಲೆಯಾಗಿ ತೇಲಿತು.

**ಜೀವಿ ಗೊಂಡೇದಹಳ್ಳಿ**



## ಬರ್ತಾ ಇತ್ತು...

ಯಾದಗಿರಿ ಕಡೆಯ ಸ್ನೇಹಿತರೊಬ್ಬರು ಫೇಸ್‌ಬುಕ್ ಮೂಲಕ ಪರಿಚಿತರು. ಅಲ್ಲಿಯ ಭಾಷಾ ಶೈಲಿ ಸ್ವಲ್ಪ ಭಿನ್ನ. ಮೊನ್ನೆ ಹೀಗೇ ವಾಟ್ಸಪ್‌ನಲ್ಲಿ ಚಾಟ್ ಮಾಡುವಾಗ 'ಏನಿತ್ತು ಟಿಫಿನ್?' ಅಂತಾ ಕೇಳಿದೆ. 'ಬೆಳಿಗ್ಗೆ ಚಪಾತಿ ಬರ್ತಾ ಇತ್ತು' ಎನ್ನುವ ಉತ್ತರ ಬಂತು. 'ಏನು? ಚಪಾತಿ ಬರ್ತಾ ಇತ್ತಾ? ಎಲ್ಲಿಂದ ಬರ್ತಾ ಇತ್ತು?' ಚಕಿತಗೊಂಡು ಕೇಳಿದ್ದೆ. ನಗುವ ಇಮೋಜಿ ಹಾಕಿ, ''ನಮ್ಮ ಕಡೆ 'ಬರ್ತಾ' ಎಂದರೆ ಎಲ್ಲ ರೀತಿಯ ತರಕಾರಿಗಳನ್ನು ಹಾಕಿ ಮಾಡುವ ಪಲ್ಯ'' ಎಂದು ಉತ್ತರಿಸಿದರು.

**ನಳಿನಿ ಟಿ ಭೀಮಪ್ಪ**

